ಪಾಯಿ ವರಮಾನ ಬರುತ್ತದೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ತಿದ್ದುಪಡಿ ಮಾಡಿ ಯಾರು ಈ ದರಖಾಸ್ತು ಭೂಮಿಗಾಗಿ ಅರ್ಜಿ ಹಾಕಿಕೊಂಡಿರುತ್ತಾರೋ ಅವರಿಗೆ ದೊರಕುವ ಹಾಗೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ಹೇಳುತ್ತೇನೆ. ಎರಡನೆಯದಾಗಿ ದಿನಾಂಕ ೧-೧-೮೯ರಂದು ಕೆಲವರು ಈ ದರಖಾಸ್ತು ಭೂಮಿ ಪಡೆಯುವುದಕ್ಕೆ ಅರ್ಜಿ ಹಾಕಿಕೊಂಡಿರುತ್ತಾರೆ. ಅಲ್ಲದೆ ಹಿಂದಿನ ದಿನಗಳಲ್ಲೂ ಮತ್ತು ಆನಂತರವೂ ಅರ್ಜಿ ಹಾಕಿಕೊಂಡಿರುತ್ತಾರೆ. ಸರ್ಕಾರದವರು ಕೊಟ್ಟಂಥಾ ಒಂದು ನಿಗದಿಯಾದ ಸಮಯದಲ್ಲಿ ಕೆಲವರು ಹಾಕಿಲ್ಲ, ಹಿಂದಿನ ದಿನವೂ ಮತ್ತು ಆನಂತರವೂ ಅರ್ಜಿ ಹಾಕಿದಂಥಾವರು ನನ್ನ ತಿಳುವಳಿಕೆ ಪ್ರಕಾರ ಸುಮಾರು ೬ ಸಾವಿರಕ್ಕಿಂತ ಹೆಚ್ಚಾಗಿ ಅರ್ಜಿಗಳು ಬಂದಿವೆ. ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಈಗ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ. ಅದರ ಬಗ್ಗೆ ಮಾಹಿತಿ ತರಿಸಿಕೊಂಡು ತಮಗೆ ತಿಳಿಸುತ್ತೇನೆ.

(iii) ಟೀ. ನರಸೀಪುರ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಆರಕ್ಷಕ ಉಪ ಠಾಣೆ ಗಳನ್ನು ತೆರೆಯುವ ಬಗ್ಗೆ.

ಶ್ರೀ ಕೆ. ಜಿ. ರಾಮಸ್ವಾಮಿ (ಬನ್ನೂರು).— ಮಾನ್ಯ ಅಧ್ಯಕ್ಷರೆ, ಟೀನರಸೀಪುರ ತಾಲ್ಲೂಕಿನ ಬನ್ನೂರು ಹೋಬಳಿ ತಂರಗನೂರು, ಸೋಸಲೆ ಹೋಬಳಿ ಚಿದರಹಳ್ಳಿ ಮತ್ತು ತಲಕಾಡು ಹೋಬಳಿ ಮುಡುಕುತೊರೆ ಗ್ರಾಮಗಳಲ್ಲಿ ಆರಕ್ಷಕ ಉಪಠಾಣೆಯನ್ನು ಕೂಡಲೇ ತೆರೆಯುವ ಬಗ್ಗೆ.

ಟೀನರಸೀಪುರ ತಾಲ್ಲೂಕಿನ ಮೇಲ್ಕಂಡ ಗ್ರಾಮಗಳಲ್ಲಿ ಆರಕ್ಷಕ ಉಪಠಾಣೆ ಇಲ್ಲದೆ ಜನರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಶಾಂತಿ ರಕ್ಷಣೆ ಸಲುವಾಗಿ ಹಾಗೂ ಬಡಜನರಿಗೆ ಆಗತಕ್ಕ ಅನ್ಯಾಯಗಳನ್ನು ನಿಲ್ಲಿಸುವ ಸಲುವಾಗಿ ಆರಕ್ಷಕ ಠಾಣೆಯನ್ನು ಮೇಲ್ಕಂಡ ಗ್ರಾಮಗಳಲ್ಲಿ ತೆರೆಯುವುದು ಅಗತ್ಯವಾಗಿದೆ, ಸ್ವಾಮಿ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).— ಮಾನ್ಯ ಅಧ್ಯಕ್ಷರೆ, ಆ ಭಾಗದಲ್ಲಿ ಔಟ್ ಪೋಲೀಸ್ ಸ್ಟೇಷನ್ ತೆರೆಯಬೇಕು ಎಂದು ಕೇಳಿದ್ದಾರೆ, ಅದನ್ನು ಪರಿಶೀಲಿಸುತ್ತೇನೆ.

(iv) ಸರ್ಕಾರಿ ಸಹಾಯಧನ ಪೋಷಿತ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ಸಹ ಸರ್ಕಾರಿ ನೌಕರರಂತೆ ಸಾಲ ಸೌಲಭ್ಯಗಳನ್ನು ಕೊಡುವ ಬಗ್ಗೆ.

ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಲಂದ).—ಸರ್ಕಾರಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಾಲಾ ಶಿಕ್ಷಕರಿಗೆ ವಾಹನಗಳನ್ನು ಕೊಳ್ಳಲು, ಮನೆಗಳನ್ನು ಕಟ್ಟಲು, ಸಾಲ ಸೌಲಭ್ಯಗಳನ್ನು ನೀಡಿರುವಂತೆ ಸರ್ಕಾರಿ ಸಹಾಯ ಧನ ಪೋಷಿತ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೂ ಸದರಿ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ ಸರ್ಕಾರದವರು ಕೂಡಲೇ ಸೂಕ್ತ ಕ್ರಮ ಕೈಕೊಳ್ಳವುದು. ಅಂತೆಯೇ ಸರ್ಕಾರಿ ಶಾಲೆಗಳಿಂದ ನಿವೃತ್ತರಾಗುವ ಶಿಕ್ಷಕರಿಗೆ ತಕ್ಷಣ ನಿವೃತ್ತಿ ವೇತನ ದೊರೆಯುವಂತೆ ಮಾಡಲಾಗಿದೆ, ಸರ್ಕಾರಿ ಸಹಾಯಧನ ಪೋಷಿತ ಶಾಲೆಗಳಿಂದ ನಿವೃತ್ತರಾಗುವ ಶಿಕ್ಷಕರಿಗೂ ತಕ್ಷಣ ನಿವೃತ್ತಿ ವೇತನ ದೊರೆಯುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತಾ ಇದ್ದೇನೆ.

ಶ್ರೀ ಎಂ. ರಘುಪತಿ.—ಈಗ ಈ ವಿಚಾರವನ್ನು ಮಾನ್ಯ ಸದಸ್ಯರು ನಮ್ಮ ಎದುರುಗಡೆ ಹೇಳಿದ್ದಾರೆ. ಈ ವಿಷಯದಲ್ಲಿ ಸರ್ಕಾರ ಇನ್ನೂ ಯಾವ ನಿರ್ಣಯವನ್ನೂ ತೆಗೆದುಕೊಂಡಿಲ್ಲ, ನಿರ್ಣಯ ತೆಗೆದುಕೊಂಡಾಗ ಅವರಿಗೆ ತಿಳಿಸುತ್ತೇನೆ.

V ಆರ್. ಮುನಿಸ್ವಾಮಿ ಎಂಬುವರು ಕೋಲಾರ ಜಿಲ್ಲೆಯಲ್ಲಿ ಕೊಲೆಯಾತರುವ ಬಗ್ಗೆ

ಶ್ರೀ ಆರ್, ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ಅಧ್ಯಕ್ಷರೆ. ತಾರೀಖು ೨೫ನೇ ಮಾರ್ಚ್ ತಿಂಗಳಲ್ಲಿ ಆರ್. ಮುನಿಸ್ವಾಮಿ ಪ್ರೊಬೆಷನರಿ ಆಫೀಸರ್ ಕೋಲಾರ ಗ್ರಾಮೀಣ ಬ್ಯಾಂಕ್, ಯಲ್ಲೋಡು, ಶಾಖೆ ಗುಡಿಬಂಡೆ ತಾಲ್ಲೂಕು, ಕೋಲಾರ ಜಿಲ್ಲೆಯಲ್ಲಿ ರಾತ್ರಿ ಸಮಯದಲ್ಲಿ ಭೀಕರ ಕೊಲೆಗೆ ಈಡಾಗಿದ್ದಾರೆ. ಅಲ್ಲಿನ ಜನ ಭೀತಿಯಿಂದ ಕೂಡಿದ್ದಾರೆ. ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮಗಳನ್ನು ತಿಳಿಸಬೇಕೆಂದು ಕೊರುತ್ತೇನೆ, ಜನರಲ್ಲಿ ಪ್ರಶಾಂತ ವಾತಾವರಣವನ್ನು ಕಲ್ಪಿಸಿ ಸತ್ತವರ ಕುಟುಂಬಕ್ಕೆ ಪರಿಹಾರವನ್ನು ಒದಗಿಸಲು ಈ ಮೂಲಕ ಕೋರುತ್ತೇನೆ.

ಈ ಕೊಲೆಯಲ್ಲಿ ಪ್ರಭಾವಿತ ವ್ಯಕ್ತಿಗಳ ಕೈವಾಡವಿದೆ ಎಂದು ಸಂಶಯ ಬರುತ್ತದೆ. ಇದುವರೆಗೆ ಯಾರನ್ನೂ ದಸ್ತಗಿರಿ ಮಾಡಿಲ್ಲ. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಾಮುಖ್ಯತೆ ಇರುವುದ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ, (ಮಾನ್ಯ ಗೃಹ ಮಂತ್ರಿಗಳು).—ಈಗತಾನೇ ಈ ವಿಷಯವನ್ನು ತಿಳಿಸಿದ್ದಾರೆ ಇದರ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನು

VI ಕಾಲೇಜುಗಳಲ್ಲಿ ರ್ಯಾಗಿಂಗ್ ಹಾವಳಿ ತಪ್ಪಿಸುವ ಬಗ್ಗೆ.

SRI T. S. MANI (K. G. F.)—Sir, Ragging has become a meance durnig the recent years, Government has not taken steps to prevent it. Many students have been subjected to torture.

Recently in a private engineering college near Kadugodi (White Field) students have been subjected to ragging. One of them is subjected to sodomy also by force, which should be condemned highly. It is learnt that the police in whitefield are not taking proper steps to protect the victims. I demand that Government should strictly instruct the police and give all protection to students subjected to ragging,

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಮಂತ್ರಿಗಳು),—ರ್ಯಾಗಿಂಗ್ ಆದ ಕೂಡಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ. ಇಲ್ಲಿ ಈಗತಾನೇ ವಿಷಯವನ್ನು ತಿಳಿಸಿದ್ದಾರೆ. ಆದರೂ ಕೂಡ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

VII ಚಿಂತಾಮಣಿ ಟಿ. ಡಿ. ಬಿ.ಯವರ ಮಳಿಗೆಗಳನ್ನು ಅಧಿಕಾರಿಗಳು ಹಂಚಿರುವ ಬಗ್ಗೆ

ಶ್ರೀ ಕೆ. ಎಂ. ಕೃಷ್ಣರೆಡ್ಡಿ.—ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕು ಬೋರ್ಡಿಗೆ ಸೇರಿದ ಮಳಿಗೆಳನ್ನು ಆಡಳಿತಾಧಿಕಾರಿಗಳು ಸಾರ್ವಜನಿಕರ ಗಮನಕ್ಕೆ ತಾರದೆ ಬೇರೆಯವರಿಗೆ ಕೊಟ್ಟಿರುವು ದನ್ನು ಮಾನ್ಯ ಸಚಿವರು ಗಮನಿಸಿದ್ದಾರೆಯೇ, ಅದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಎ. ಲಕ್ಷ್ಮಿಸಾಗರ್.—ಮಾನ್ಯ ಸದಸ್ಯರು ತಾಲ್ಲೂಕು ಅಭಿವೃದ್ಧಿ ಮಂಡಳಿ ಬಗ್ಗೆ ಕೇಳಿದ್ದಾರೆ' ಅಲ್ಲಿ ಮಳಿಗೆಗಳನ್ನು ಯಾರಿಗೆ ಕೊಟ್ಟಿದ್ದಾರೆ ಏನ್ನುವುಬರ ಬಗ್ಗೆ ವಿವರ ತರಿಸಿ ಮಾನ್ಯ ಸದಸ್ಯರಿಗೆ ಉತ್ತರ ಕೊಡುತ್ತೇನೆ.